ದಿನಾಂಕ: 02-08-2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆ ಸಂಬಂಧವಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿರುವ ಸಂಗತಿಗಳನ್ನು ತಾನೇ ಹೇಳಿ ಬರೆಸಿದ್ದು ಅದು ಸತ್ಯವಾಗಿರುತ್ತದೆ ಎಂದು ಒಪ್ಪಿ ಸಹಿ ಮಾಡಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಜಿಎಸ್‌ಪಿ ವಕೀಲರಿಂದ:

ಅಸಲು ದಾವಾ ನಂ.394/1935ರ ಡಿಕ್ರಿಯ ದೃಡೀಕೃತ ಪ್ರತಿಯನ್ನು ನಿಪಿ 1 ಎಂದು, ಮಾರಾಟದ ರಶೀದಿಯ ಪ್ರತಿಯನ್ನು ನಿಪಿ 2 ಎಂದು, ದಿ:10.06.1967ರ ನನ್ನ ಹೆಸರಿಗೆ ಮೃತ್ಯೂ ಪತ್ರ ಬರೆದಿರುವ ದೃಡೀಕೃತ ಪ್ರತಿಯನ್ನು ನಿಪಿ 3 ಎಂದು, ನನ್ನ ಗಂಡ ಬಲರಾಮೇಗೌಡ ಇವರ ಮರಣ ಪ್ರಮಾಣ ಪತ್ರ ಲಭ್ಯ ಇಲ್ಲ ಎಂದು ಕೊಟ್ಟಿರುವ ಅಲಭ್ಯ ಪ್ರಮಾಣ ಪತ್ರದ ದೃಡೀಕೃತ ಪ್ರತಿಯನ್ನು ನಿಪಿ 4 ಎಂದು, ಕೈ ಬರಹದ ಪಹಣಿ ಪತ್ರಿಕೆಗಳನ್ನು ನಿಪಿ 5 ಮತ್ತು 6 ಎಂದು, ಲಕ್ಕಪ್ಪ ಎಂಬುವರ ಮೇಲೆ ಅಸಲು ದಾವಾ ನಂ.395/2016 ದಾಖಲಿಸಿದ್ದರ ಸಂಬಂದವಾಗಿ ಹಾಜರುಪಡಿಸಿರುವ ಆದೇಶ ಪುಟದ ದೃಡೀಕೃತ ಪ್ರತಿಯನ್ನು ನಿಪಿ 7 ಎಂದು, ವಾದ ಪತ್ರದ ದೃಡೀಕೃತ ಪ್ರತಿಯನ್ನು ನಿಪಿ 8 ಎಂದು, ರಾಜಿ ಅರ್ಜಿಯ ಪ್ರತಿಯನ್ನು ನಿಪಿ 9 ಎಂದು, ರಾಜಿ ಡಿಕ್ರಿಯ ಪ್ರತಿಯನ್ನು ನಿಪಿ 10 ಎಂದು, ಗಣಕೀಕೃತ ಪಹಣಿ ಪತ್ರಿಕೆಯನ್ನು ನಿಪಿ 11 ಎಂದು, ಕಂದಾಯ ಪಾವತಿ ರಶೀದಿಯನ್ನು ನಿಪಿ 12 ಎಂದು, ಪ್ರತಿವಾದಿಯರ ವಿರುದ್ದ ದೂರು ನೀಡಿದ್ದು ಅದಕ್ಕೆ ಕೆ ಆರ್ ನಗರ ಪೋಲೀಸ್‌ನವರು ನೀಡಿದ ಸ್ವೀಕೃತ ಪ್ರತಿಯನ್ನು ಒಟ್ಟಾಗಿ ನಿಪಿ 13 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲು: ಶ್ರೀ ಜಿಎಲ್‌ಡಿ ವಕೀಲರು ಸಮಯ ಕೇಳಿದ್ದರಿಂದ ಸಮಯ ನೀಡಲಾಯಿತು.

ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಮರು ವಿಚಾರಣೆ: ಇಲ್ಲಾ

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಲಾಗಿದೆ,

(ರಮೇಶ ಎಸ್.ಗಾಣಿಗೇರ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಕೆ.ಆರ್.ನಗರ.